ಕರ್ನಾಟಕ ಸರ್ಕಾರ

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಉ ನಿ : ಸುಮಪ : 2016–17 ದಿನಾಂಕ: 28–07–2016

# ಪತ್ರಿಕಾ ಆಮಂತ್ರಣ

| ಕ್ರಮ ಸಂಖ್ಯೆ | ಕಾರ್ಯಕ್ರಮಗಳ ವಿವರ | ದಿನಾಂಕ / ಸಮಯ | ಕಾರ್ಯಕ್ರಮ ನಡೆಯುವ ಸ್ಥಳ |
|---|---|---|---|
| 1. | ಪತ್ರಿಕಾಗೋಷ್ಠಿ:<br><br>ಪ್ರಿಯಾಂಕ ಖರ್ಗೆ,<br>ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ಪ್ರವಾಸೋದ್ಯಮ ಖಾತೆ ರಾಜ್ಯ ಸಚಿವರು. | 29–07–2016<br>ಶುಕ್ರವಾರ<br>ಅಪರಾಹ್ನ<br>12–00 ಗಂಟೆಗೆ | ಕೊಠಡಿ ಸಂಖ್ಯೆ 318,<br>ಮೂರನೇ ಮಹಡಿ,<br>ವಿಕಾಸಸೌಧ, ಬೆಂಗಳೂರು |
| 2. | ಕನ್ನಡ–ಸಂಸ್ಕೃತಿ ಯುವಜನೋತ್ಸವ<br><br>ಉದ್ಘಾಟನೆ:<br><br>ಡಾ.ಎಲ್ ಹನುಮಂತಯ್ಯ,<br>ಅಧ್ಯಕ್ಷರು,<br>ಕನ್ನಡ ಅಭಿವೃದ್ಧಿ ಪ್ರಾಧಿಕಾರ | 29–07–2016<br>ಶುಕ್ರವಾರ<br><br>ಮಧ್ಯಾಹ್ನ<br>2–00 ಗಂಟೆಗೆ | ಎಸ್.ಎಸ್.ಎಂ.ಆರ್.ವಿ<br>.ಕಾಲೇಜು ಆವರಣ,<br>ಬೆಂಗಳೂರು |

ನಿರ್ದೇಶಕರ ಪರವಾಗಿ

## ಪತ್ರಿಕಾ ಪ್ರಕಟಣೆ

# ಬೇಕರಿ ತರಬೇತಿ

ಬೆಂಗಳೂರು, ಜುಲೈ 28 (ಕರ್ನಾಟಕ ವಾರ್ತೆ)

ಬೇಕರಿ ತರಬೇತಿ ಘಟಕದ ವತಿಯಿಂದ 4 ವಾರಗಳ ಬೇಕರಿ ತರಬೇತಿ ಕಾರ್ಯಕ್ರಮವನ್ನು ಆಸಕ್ತಿಯುಳ್ಳ ಬೇಕರಿದಾರರಿಗೆ ಉದ್ದಿಮೆ ಮತ್ತು ಗೃಹಿಣಿಯರಿಗಾಗಿ ಆಯೋಜಿಸಲಾಗಿದೆ. ತರಬೇತಿಯು ಆಗಸ್ಟ್ 1 ರಿಂದ ಪ್ರಾರಂಭವಾಗಲಿದೆ. ಈ ತರಬೇತಿಯಲ್ಲಿ

ಬ್ರೆಡ್, ಬನ್, ಪಫ್ಸ್, ಕೇಕ್‌ಗಳು ವಿಶೇಷ ಬಿಸ್ಕತ್ತುಗಳು, ರೋಲ್ಸ್‌ಗಳು ಮತ್ತಿತರ ಆಕರ್ಷಕ ಬೇಕರಿ ಪದಾರ್ಥಗಳ ತಯಾರಿಕೆಯನ್ನು ಕಲಿಸಲಾಗುವುದು.

ಅಭ್ಯರ್ಥಿಗಳು ಸ್ವತ: ಪದಾರ್ಥ ತಯಾರಿಸುವ ಮೂಲಕ ಕಲಿಯುವ ಸೌಲಭ್ಯವಿದೆ. ಯಾವುದೇ ವಿದ್ಯಾರ್ಹತೆ ಅವಶ್ಯಕತೆಯಿಲ್ಲ. ತಯಾರಿಕೆಗೆ ಬೇಕಾದ ಕಚ್ಚಾ ಪದಾರ್ಥಗಳನ್ನು ತರಬೇತಿ ಘಟಕದಲ್ಲೇ ಒದಗಿಸಲಾಗುವುದು.

ಹೆಚ್ಚಿನ ವಿವರಗಳಿಗೆ ಸಂಯೋಜಕರು, ಬೇಕರಿ ತರಬೇತಿ ಕೇಂದ್ರ, ವಿಸ್ತರಣಾ ನಿರ್ದೇಶನಾಲಯ, ಕೃಷಿ ವಿಶ್ವ ವಿದ್ಯಾನಿಲಯ, ಹೆಬ್ಬಾಳ, ಬೆಂಗಳೂರು – 560 024, ಇವರನ್ನು ಖುದ್ದಾಗಿ ಅಥಾವ ದೂರವಾಣಿ ಸಂಖ್ಯೆ 23513370 ಮೂಲಕ ಕಚೇರಿಯ ಕೆಲಸದ ವೇಳೆಯಲ್ಲಿ ಸಂಪರ್ಕಿಸಲು ಕೋರಬಹುದಾಗಿದೆ.

ಬಾಬು:ಜಿಪಿಆರ್.

# BAKING COURSE

Bengaluru, July 28 (Karnataka Information)

The Bakery Training Unit., Hebbal, Bengaluru is conducting 4 weeks training course on Bakery Technology for the benefit of Housewives and Entrepreneurs from 1st August 2016.

Bakery products like special Biscuits, Bread Rolls, Puffs, Cakes and fancy items will be taught during the course. Participants will be allowed to learn by preparing the products by themselves.

The interested persons can contact Co-ordinator in person or through telephone No 23513370 during office hours.

babu:gpr.

# ಸಚಿವರ ಪ್ರವಾಸ

ಬೆಂಗಳೂರು, ಜುಲೈ 28 (ಕರ್ನಾಟಕ ವಾರ್ತೆ)

**ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಅವರು ಜುಲೈ 29 ರಂದು ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಪ್ರವಾಸ ಮಾಡುವರು.**

**ಬಾಬು:ಜಿಪಿಆರ್.**

# <u>ಸಚಿವಾಲಯಕ್ಕೆ ಸಚಿವೆ ಉಮಾಶ್ರೀ ಭೇಟಿ-ಕಡತ ವಿಲೇವಾರಿ ತೀವ್ರಗೊಳಿಸಲು ಸೂಚನೆ</u>

**ಬೆಂಗಳೂರು, ಜುಲೈ 28 (ಕರ್ನಾಟಕ ವಾರ್ತೆ)**

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಲ್ಲಿ ಬಾಕಿ ಇರುವ ಕಡತಗಳನ್ನು ತೀವ್ರಗತಿಯಲ್ಲಿ ವಿಲೇ ಮಾಡಬೇಕು ಹಾಗೂ ಹದಿನೈದು ದಿನಗಳಲ್ಲಿ ಕಡತ ವಿಲೇವಾರಿ ಶೇಕಡವಾರು ಪ್ರಮಾಣ ತೃಪ್ತಿದಾಯಕವಾಗಿರಬೇಕು ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಚಿವೆ ಉಮಾಶ್ರೀ ಸೂಚಿಸಿದ್ದಾರೆ.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಸಚಿವಾಲಯಕ್ಕೆ ಇಂದು ಭೇಟಿ ನೀಡಿದ ಸಚಿವೆ ಉಮಾಶ್ರೀ ಸಚಿವಾಯದಲ್ಲಿ ಬಾಕಿ ಇರುವ ಕಡತಗಳನ್ನು ಪರಿಶೀಲಿಸಿದರು. ಪ್ರಸ್ತುತ ಇಲಾಖೆಯಲ್ಲಿ 1607 ಕಡತಗಳು ವಿಲೇ ಮಾಡಲು ಬಾಕಿ ಉಳಿದಿದ್ದು, ವಿಲೇವಾರಿ ಪ್ರಮಾಣ ಶೇ.54.99 ರಷ್ಟಿದೆ. ಇದು ಗರಿಷ್ಠ ಪ್ರಮಾಣ ಮುಟ್ಟಬೇಕು. ಆ ದಿಸೆಯಲ್ಲಿ ಗುರಿ ಸಾಧನೆಗಾಗಿ ಇನ್ನೂ 15 ದಿನಗಳಲ್ಲಿ ದೊಡ್ಡ ಪ್ರಮಾಣದಲ್ಲಿ ಕಡತ ವಿಲೇವಾರಿ ಮಾಡಬೇಕು. ಅಪರ ಮುಖ್ಯಕಾರ್ಯದರ್ಶಿಗಳು, ಇಲಾಖಾ ನಿರ್ದೇಶಕರು, ಉಪ ಕಾರ್ಯದರ್ಶಿ ಹಾಗೂ ಅಧೀನ ಕಾರ್ಯದರ್ಶಿಗಳು ಒಂದೆಡೆ ಕೂತು ಚರ್ಚಿಸಿ, ಕಡತ ವಿಲೇವಾರಿಗೆ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಆದೇಶಿಸಿದರು.

ಎರಡು, ಮೂರು ವರ್ಷಕ್ಕಿಂತ ಹಳೆಯದಾದ ಕಡತಗಳ ಬಗ್ಗೆ ಕೂಡಲೇ ತೀರ್ಮಾನ ತೆಗೆದುಕೊಂಡು ಅವುಗಳನ್ನು ಮುಕ್ತಾಯಗೊಳಿಸಬೇಕು ಹಾಗೆಯೇ ಇಲಾಖಾ ವಿಚಾರಣೆ ಮತ್ತು ನ್ಯಾಯಾಲಯದಲ್ಲಿ ಬಾಕಿ ಉಳಿದಿರುವ ಪ್ರಕರಣಗಳ ಬಗ್ಗೆ ಅವುಗಳ ಶೀಘ್ರ ವಿಲೇವಾರಿಗೆ ಸಂಬಂಧಪಟ್ಟ ಅಧಿಕಾರಿ ಹಾಗೂ ನ್ಯಾಯವಾದಿಗಳೊಂದಿಗೆ ಸಮಾಲೋಚನೆ ನಡೆಸಿ ಆ ಕಡತಗಳನ್ನೂ ಸಹ ವಿಲೇಗೊಳಿಸಲು ಕ್ರಮ ಕೈಗೊಳ್ಳಬೇಕೆಂದು ಸಚಿವೆ ಉಮಾಶ್ರೀ ಸೂಚಿಸಿದ್ದಾರೆ.

ಅಪರ ಮುಖ್ಯ ಕಾರ್ಯದರ್ಶಿ ರಜನೀಶ್ ಗೋಯೆಲ್ ಹಾಗೂ ಇಲಾಖೆಯ ಉನ್ನತಾಧಿಕಾರಿಗಳು ಈ ಸಂದರ್ಭದಲ್ಲಿ ಹಾಜರಿದ್ದರು.

ಬಾಬು/ಕೆಎಂ